ಮೂಲ ದಾವಾ ಸಂಖ್ಯೆ 82/2015 ಪಿ ಡಬ್ಲ್ಯೂ 1 ಚಿತ್ರಗಾರ ಮಲ್ಲಿಕಾರ್ಜುನ ಬಿನ್ ಲಕ್ಷ್ಮಣಪ್ಪ

(ದಿನಾಂಕ 26-06-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.)

<u>ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಬಿ ವಿ ವಕೀಲರಿಂದಃ-</u>

ದಾವಾಸ್ತಿ ಮೂಲತಃ ನಮ್ಮದೇ ಅಸ್ತಿಯಾಗಿದ್ದು ನಮ್ಮ ದೊಡ್ಡಪ್ಪನವರು ಖರೀದಿ ಮಾಡಿದಂತಹ ಆಸ್ತಿಯಾಗಿರುತ್ತದೆ. ನಮ್ಮ ದೊಡ್ಡಪ್ಪನವರು 1955 ನೇ ಸಾಲಿನಲ್ಲಿ ಪೋಲೀಸ್ ಭೀಮನಗೌಡರಿಂದ ದಾವಾಸ್ತಿಯನ್ನು ಖರೀದಿ ಮಾಡಿದ್ದರು. ನನಗೆ ಖರೀದಿ ಪತ್ರ ಹಾಗೂ ಪಹಣಿ ದಾಖಲಾತಿಗಳು ಏನು ಎಂಬುದು ಗೊತ್ತಿರುತ್ತದೆ ನನಗೆ ಓದು ಬರಹವನ್ನು ಬರುತ್ತದೆ. ಪಹಣಿ ದಾಖಲಾತಿಗಳು 1967-68 ನೇ ಸಾಲಿನಿಂದ ಪ್ರಾರಂಭವಾಗಿರುತ್ತವೆ. ನಾನು 1967-68 ರ ಪಹಣಿ ದಾಖಲಾತಿಗಳನ್ನು ಪರಿಶೀಲಿಸಿದ್ದೇನೆ. ದಾವಾಸ್ವತ್ತಿನ 1967-68 ನೇ ಸಾಲಿನ ಪಹಣಿಯು ಜಂಟಿ ಪಹಣಿಯ ದಾಖಲಾತಿಯಾಗಿತ್ತು. 1967-68 ನೇ ಸಾಲಿನಲ್ಲಿ ದಾವಾ ಸ್ವತ್ತಿನ ಪಹಣಿ ದಾಖಲಾತಿಯು ಯಾರ ಹೆಸರಿನಲ್ಲಿರುತ್ತದೆಂದು ಈಗ ಹೇಳಲು ನೆನಪಿರುವುದಿಲ್ಲ.

1967-68 ರಿಂದ 1991 ನೇ ಸಾಲಿನ ಪಹಣಿ ದಾಖಲಾತಿಯನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ದಾವಾ ಸ್ವತ್ತು ಆ ಸಾಲಿನಲ್ಲಿ ಹೆಗ್ಡಾಳ್ ಬೈಲಪ್ಪ ಎಂಬ ಹೆಸರಿರುತ್ತದೆಂದು ನುಡಿಯುತ್ತಾರೆ. ಹೆಗ್ಡಾಳ್ ದುರುಗಪ್ಪ ಪ್ರತಿವಾದಿಯು ನನಗೆ ಪರಿಚಯಸ್ಥರು . ಅವರ ತಂದೆಯ ಹೆಗ್ಡಾಳ್ ಬೈಲಪ್ಪ ಎಂದರೆ ಸರಿ. 1991 ನೇ ಸಾಲಿನಲ್ಲಿ ದಾವಾ ಸ್ವತ್ತಿನ ಪಹಣಿ ದಾಖಲಾತಿಯು ಚಿತ್ರಗಾರ ರಾಮಣ್ಣ ಎಂಬುವವರ ಹೆಸರಿನಲ್ಲಿ ಬಂದಿರುತ್ತದೆ. 1991 ನೇ ಸಾಲಿನಲ್ಲಿ ದಾವಾ ಸ್ವತ್ತಿನ ಪಹಣಿಯು ಜಿನಗಾರ ರಾಮಣ್ಣ ಎಂಬ

ಹೆಸರಿನಲ್ಲಿ ಬಂದಿರುತ್ತದೆಂದರೆ ಸಾಕ್ಷಿಯು ಚಿತ್ರ ಗಾರ ರಾಮಣ್ಣ ಮತ್ತು ಜಿನಗಾರ ರಾಮಣ್ಣ ಇಬ್ಬರೂ ಒಬ್ಬರೇ ಎಂದು ಸಾಕ್ಷಿ ನುಡಿಯುತ್ತಾರೆ.

ಜಿನಗಾರ ರಾಮಣ್ಣ ನನ್ನ ತಂದೆಗೆ ಸ್ವಂತ ಅಣ್ಣನಾಗಬೇಕು. ನನ್ನ ತಂದೆಯ ಹೆಸರು ಚಿತ್ರ ಗಾರ ಲಕ್ಷ್ಮಣ. ನನ್ನ ತಂದೆಯು 2018 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ಜಿನಗಾರ ರಾಮಣ್ಣನಿಗೆ 4 ಜನ ಗಂಡು ಮಕ್ಕಳು, ಅವರೆಂದರೆ ರಿಂದಪ್ಪ, ಮಲ್ಲಿಕಾರ್ಜುನ, ಪ್ರಕಾಶ್, ವಸಂತ ಹಾಗೂ ಒಬ್ಬ ಹೆಣ್ಣು ಮಗಳು ಅವರೆಂದರೆ ಕಸ್ತೂರಿ ಇರುತ್ತಾರೆ. 5 ಜನ ಮಕ್ಕಳು ಜೀವಂತವಿದ್ದಾರೆ.

ನಮ್ಮ ತಂದೆ ಒಟ್ಟು ನಾವು 4 ಜನ ಮಕ್ಕಳು ಅವರೆಂದರೆ ನರಸಮ್ಮ, ರೇಣುಕಾ, ಗೀತಾಲಕ್ಷ್ಮಿ ಮತ್ತು ನಾನು ಇರುತ್ತೇವೆ. ಇದರಲ್ಲಿ ರೇಣುಕ ಪೌತಿಯಾಗಿರುತ್ತಾರೆ. ಪೌತಿ ವಾರಸು ಎಂದರೆ ನನಗೆ ಏನೆಂದು ಗೊತ್ತಿರುತ್ತದೆ. ದಾವಾಸ್ತಿಯು ನನ್ನ ದೊಡ್ಡಪ್ಪ ಸ್ವತಃ ಖರೀದಿ ಮಾಡಿದಂತಹ ಆಸ್ತಿಯಾಗಿರುತ್ತದೆಂದರೆ ಸರಿ. ಪೌತಿ ವಾರಸಿನ ಪ್ರಕಾರ ದಾವಾಸ್ತಿಯು ಆತನ ವಾರಸುದಾರರಿಗೆ ಹೋಗಬೇಕಾಗುತ್ತದೆಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ದೊಡ್ಡಪ್ಪ ಪಾಲುವಿಭಾಗವಾಗಬೇಕಾದಂತಹ ಆಸ್ತಿಗಳನ್ನು ಅವರೇ ಮಾರಾಟ ಮಾಡಿಕೊಂಡಿದ್ದು ಕಾರಣ ದಾವಾಸ್ತಿಯನ್ನು ನನಗೆ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಈ ಸಂಗತಿಯನ್ನು ನಾನು ನನ್ನ ವಾದಪತ್ರದಲ್ಲಿ ತಿಳಿಸಿರುವುದಿಲ್ಲವೆಂದರೆ ಸರಿ ಹಾಗೂ ಪ್ರಥಮ ಬಾರಿ ಈ ದಿನ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆಂದರೆ ಸರಿ.

ಮೂಲ ದಾವಾ ಸಂಖ್ಯೆ 82/2015 ಪಿ ಡಬ್ಲ್ಯೂ 1 ಚಿತ್ರಗಾರ ಮಲ್ಲಿಕಾರ್ಜುನ ಬಿನ್ ಲಕ್ಷ್ಮಣಪ್ಪ

ದಾವಾಸ್ತಿಗೆ ಸಂಬಂಧಿಸಿದಂತೆ ನನ್ನ ದೊಡ್ಡಪ್ಪ, ನನ್ನ ತಂದೆಗಾಗಲೀ ಅಥವಾ ನನಗಾಗಲೀ ಯಾವುದಾದರೂ ದಾಖಲಾತಿಗಳನ್ನು ನಿಮಗೆ ಬರೆದುಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿಯು ಯಾವುದೇ ದಾಖಲಾತಿಗಳನ್ನು ಬರೆದುಕೊಟ್ಟಿರುವುದಿಲ್ಲ ಆದರೆ ಸ್ವತಃ ನನ್ನ ದೊಡ್ಡಪ್ಪ ತನ್ನ ಹೆಸರಿನಲ್ಲಿದ್ದಂತಹ ಕ್ರಯ ಖರೀದಿ ಪತ್ರ ಮತ್ತು ಪಹಣಿಗಳನ್ನು ನನ್ನ ಹೆಸರಿಗೆ ದಾಖಲಾತಿಗಳನ್ನು ವರ್ಗಾವಣೆ ಮಾಡಿಸಿದ್ದಾರೆಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪ ನನ್ನ ಹೆಸರಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಖರೀದಿ ಪತ್ರ, ದಾನಪತ್ರ, ಬಿಡುಗಡೆ ಪತ್ರ, ಯಾವುದೇ ಕರಾರು ಪತ್ರ ಮಾಡಿಕೊಟ್ಟಿರುವುದಿಲ್ಲವೆಂದರೆ ಸರಿ.

ನನಗೆ ಖರೀದಿ ಎಂಬ ಪದದ ಅರ್ಥ ಗೊತ್ತಿರುತ್ತದೆ. ಜಮೀನನ್ನು ಖರೀದಿಸುವಾಗ ಯಾರ ಹೆಸರಿನಲ್ಲಿ ಆ ಜಮೀನು ಇರುತ್ತದೆಂದು ನೋಡುತ್ತೇವೆಂದರೆ ಸರಿ. ಯಾವುದಾದರೆಂದು ಜಮೀನನ್ನು ಖರೀದಿಸಿದಾಗ ಖರೀದಿ ಮಾಡಿದವನಿಗೆ ಆ ಜಮೀನು ವರ್ಗಾವಣೆಯಾಗುತ್ತದೆಂದರೆ ಸರಿ. ಯಾವುದಾದರೊಂದು ಜಮೀನನ್ನು ಖರೀದಿ ಪತ್ರದ ಮೂಲಕ ದಾನ ಪತ್ರದ ಮೂಲಕ ಬಿಡುಗಡೆ ಪತ್ರದ ಮೂಲಕ ಖರೀದಿಸಿದ್ದಲ್ಲಿ ಆ ಮೂಲಕವೇ ಜಮೀನನ್ನು ಖರೀದಿಸಿದವರಿಗೆ ಹಕ್ಕು ವರ್ಗಾವಣೆಯಾಗುತ್ತದೆಂದರೆ ಸರಿ.

ದಾವಾ ಸ್ವತ್ತು ಹಕ್ಕುಬಿಡುಗಡೆ ಪತ್ರದ ಮೂಲಕ ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ಸದರಿ ಹಕ್ಕುಬಿಡುಗಡೆ ಪತ್ರದ ದಾಖಲಾತಿಯನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾಸ್ತಿಯು ಯಾವತ್ತಿದ್ದರೂ ಪ್ರತಿವಾದಿಯ ಆಸ್ತಿಯಾಗಿರುತ್ತದೆಂದರೆ ಸರಿಯಲ್ಲ. ಪ್ರತಿವಾದಿಯು ತೀರಿದ ನಂತರ ಆತನ ಮಕ್ಕಳಾದ ಪ್ರತಿವಾದಿಗಳಿಗೆ ದಾವಾ ಸ್ವತ್ತು ಹಕ್ಕುವರ್ಗಾವಣೆಯಾಗಿರುತ್ತದೆಂದರೆ ಸರಿಯಲ್ಲ. ಬೈಲಪ್ಪ ಸಾಯುವವರೆಗೂ ದಾವಾಸ್ತಿಯಲ್ಲಿ ಸ್ವಾಧೀನಾನುಭವದಲ್ಲಿದ್ದು ಆತನ ಮರಣಾನಂತರ ಆತನ ಮಕ್ಕಳಾದ ಪ್ರತಿವಾದಿಗಳು ಇಂದಿನವರೆಗೂ ಸ್ವಾಧೀನಾನುಭವದಲ್ಲಿರುತ್ತಾರೆಂದರೆ ಸಾಕ್ಷಿಯು ಮೊದಲು ನನ್ನ ದೊಡ್ಡಪ್ಪ ಮತ್ತು ನನ್ನ ತಂದೆ ಒಟ್ಟಾಗಿ ಸಾಗುವಳಿ ಮಾಡುತ್ತಿದ್ದು ಈಗ 25 ವರ್ಷಗಳಳಿಂದ ನಾನೇ ದಾವಾ ಸ್ವತ್ತಿನ ಸಾಗುವಳಿ ಮಾಡುತ್ತಿದ್ದೇನೆಂದು ನುಡಿಯುತ್ತಾರೆ.

ಭೀಮನಗೌಡರಿಂದ ನನ್ನ ದೊಡ್ಡಪ್ಪ ಸದರಿ ಆಸ್ತಿಯನ್ನು ಖರೀದಿ ಮಾಡಿದಾಗ ದಾವಾ ಸ್ವತ್ತು ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿರುವುದಿಲ್ಲ ಆಗ ನಾನು ಚಿಕ್ಕವನಿದ್ದೆ. ನನ್ನ ಹೆಸರಿನಲ್ಲಿ ದಾವಾಸ್ವತ್ತಿನ ಪಹಣಿ ದಾಖಲಾತಿಯು ಬಂದ ನಂತರ ಭೀಮನಗೌಡರಿಂದ ನನ್ನ ದೊಡ್ಡಪ್ಪ ಖರೀದಿಸಿದ ದಾವಾ ಸ್ವತ್ತಿನ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಲಾಯಿತೇ ಎಂದರೆ ಸಾಕ್ಷಿ ನಾನು ಇ ಸಿ ಮತ್ತು ಪಹಣಿ ಹಾಗೂ ಖರೀದಿಪತ್ರದ ದಾಖಲೆಗಳನ್ನು ನೋಡಿದ್ದೇನೆಂದು ನುಡಿಯುತ್ತಾರೆ.

ಪೋಲೀಸ್ ಭೀಮನಗೌಡರಿಂದ ನನ್ನ ದೊಡ್ಡಪ್ಪನು ದಾವಾಸ್ತಿಯನ್ನು ಖರೀದಿಸಿದ ನಂತರ ನನ್ನ ದೊಡ್ಡಪ್ಪನ ಹೆಸರಿಗೆ ಹಕ್ಕು ಬದಲಾವಣೆಯಾಗಿದೆ ಎಂದರೆ ಸರಿ, 1991-92 ನೇ ಸಾಲಿನಲ್ಲಿ ಹಕ್ಕು ಬದಲಾವಣೆಯಾಗಿರುತ್ತದೆ. ಪ್ರಸ್ತುತ ದಾವಾ ಸ್ವತ್ತಿನ ಪೂಃ

ಮೂಲ ದಾವಾ ಸಂಖ್ಯೆ 82/2015 ಪಿ ಡಬ್ಲ್ಯೂ 1 ಚಿತ್ರ ಗಾರ ಮಲ್ಲಿಕಾರ್ಜುನ ಬಿನ್ ಲಕ್ಷ್ಮಣಪ್ಪ

ಚಂದ್ರಶೇಖರ್ ರವರ ಆಸ್ತಿ, ಪಃ ಕೋಟೆಹಾಳ್ ಪಕೀರಮ್ಮನ ಆಸ್ತಿ, ಉಃ ಮಡಿವಾಳರ ಈರಣ್ಣನವರ ಆಸ್ತಿ ಹಾಗೂ ದಃ ಸಿ ಹೆಚ್ ಅನಿಲ್ ಕುಮಾರ್ ಮತ್ತು ಚಂದ್ರಶೇಖರ್ ರವರ ಆಸ್ತಿ ಇರುತ್ತದೆ. ಸದರಿ ಆಸ್ತಿಗಳ ಪೈಕಿ ಉತ್ತರಕ್ಕೆ ಆಸ್ತಿ ಇರುವಂತಹ ಮಡಿವಾಳರ ಈರಣ್ಣನವರು ಮೃತಪಟ್ಟಿರುತ್ತಾರೆ. ಸದರಿ ಈಗ ನಾನು ಹೇಳಿರುವಂತಹ ವ್ಯಕ್ತಿಗಳು ನ್ಯಾಯಾಲಯದಲ್ಲಿ ದಾವಾಸ್ತಿಯು ಪ್ರತಿವಾದಿಗಳಿಗೆ ಸೇರಿರುತ್ತದೆಂದು ಹಾಗೂ ದಾವಾಸ್ತಿಯಲ್ಲಿ ಹಾಲೀ ಪ್ರತಿವಾದಿಗಳೇ ಸ್ವಾಧೀನದಲ್ಲಿರುವುದಾಗಿ ಹೇಳುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ.

ದಾವಾ ಸ್ವತ್ತಿನ ಉತ್ತರಕ್ಕೆ ಕಡತದಲ್ಲಿರುವ ಸರ್ವೆ ನಂ. 140/ಸಿ-1 ರ ಸ್ವತ್ತಿನಲ್ಲಿ ಶ್ರೀ ಮಡಿವಾಳರ ಈರಣ್ಣನವರ ಸ್ವತ್ತು ಇರುತ್ತದೆಂದರೆ ಸರಿ. ಹೆಗ್ಡಾಳ್ ಪರಶುರಾಮಪ್ಪ, ಹನುಮಂತಪ್ಪ, ಹುಲುಗಪ್ಪ, ಕೊಟೇಹಾಳ್ ಪಕೀರಮ್ಮ ಇವರುಗಳು ದಾವಾ ಸ್ವತ್ತಿನ ಅಕ್ಕಪಕ್ಕದಲ್ಲಿ ಜಮೀನನ್ನು ಹೊಂದಿರುತ್ತಾರೆಂದರೆ ಸರಿ. ಸದರಿಯವರು ನಾನು ಜಮೀನಿನಲ್ಲಿ ಎಂದಿಗೂ ದಾವಾ ಸ್ವತ್ತಿನ ಜಮೀನಿನಲ್ಲಿ ಎಂದೂ ಸ್ವಾಧೀನದಲ್ಲಿಲ್ಲವೆಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ